**ಪ್ರ. ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**ಸಿ.ಸಿ ಸಂಖ್ಯೆ ::409/2014**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಅಶೋಕ್ ಕುಮಾರ್ | **PW-5** |
| **ತಂದೆಯ ಹೆಸರು** | : | ತಿಮ್ಮೇಗೌಡ | **CW-9** |
| **ವಯಸ್ಸು** | : | 52 ವರ್ಷ | |
| **ಉದ್ಯೋಗ** | : | ಪೊಲೀಸ್ ಉಪ ಅಧೀಕ್ಷಕರು | |
| **ವಾಸಸ್ಥಳ** | : | ಬೆಂಗುಳಾರು | |

**ದಿನಾಂಕಃ05-02-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

ನಾನು ಸೆಪ್ಟೆಂಬರ್ 2013 ರಿಂದ ಮೇ 2016 ರವರೆಗೆ ಮೈಸೂರು ರೈಲ್ವೆ ವೃತ್ತದ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ.

ದಿಃ 03.02.2014 ರಂದು ಈ ಪ್ರಕರಣದ ಕಡತವನ್ನು ಚಾಸಾ 8 ರವರಿಂದ ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ.

ದಿಃ 08.03.2014 ರಂದು ಅರಸೀಕೆರೆಯಿಂದ ಶಿವಮೊಗ್ಗ ರೈಲ್ವೆ ಲೈನ್ ನಲ್ಲಿ ಹೆಚ್ಚಾಗಿ ಸರಗಳ್ಳತನ ಹಾಗೂ ನಡೆಯುತ್ತಿದ್ದ ಕಾರಣ ಇದನ್ನು ನಿಗ್ರಹಿಸುವ ಸಲುವಾಗಿ ನನ್ನ ಅಧೀನ ಸಿಬ್ಬಂದಿಗಳಾದ ಚಾಸಾ 5 ರಿಂದ 7 ರವರನ್ನು ಕರೆದುಕೊಂಡು ಗಸ್ತು ಕರ್ತವ್ಯ ಮಾಡುತ್ತಿದ್ದ ಸಮಯದಲ್ಲಿ, ಬೆಳಗಿನ ಜಾವ 10.15 ಗಂಟೆ ಸಮಯದಲ್ಲಿ ಅರಸೀಕೆರೆಯಿಂದ ಬೀರೂರು ಗೆ ರೈಲ್ ನಲ್ಲಿ ಗಸ್ತು ಕರ್ತವ್ಯ ಮಾಡುತ್ತಿದ್ದ ಸಮಯದಲ್ಲಿ ರೈಲು ಬೀರೂರಿನಲ್ಲಿ ನಿಂತು ಹೊರಡುವ ಸಮಯದಲ್ಲಿ ಒಬ್ಬ ವ್ಯಕ್ತಿಯು ಅನುಮಾನಸ್ಪಾದವಾಗಿ ನಡೆದುಕೊಂಡು ಬಂದು ನಮ್ಮನ್ನು ನೋಡಿ ಓಡಲು ಪ್ರಯತ್ನಿಸಿರುತ್ತಾನೆ. ಆಗ ನಾನು ನನ್ನ ಅಧೀನ ಸಿಬ್ಬಂದಿ ಸಹಾಯದಿಂದ ಆತನನ್ನು ಹಿಡಿದು ವಿಚಾರಿಸಲಾಗಿ ಆತನು ನಮಗೆ ಅವನ ವರ್ತನೆ ಬಗ್ಗೆ ಯಾವುದೇ ಸಮಜಾಯಿಷಿ ಉತ್ತರ ನೀಡದ ಕಾರಣ ಅನುಮಾನ ಬಂದು ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಆತನ ಹೆಸರು ಹರೀಶ ಯಾನೆ ಡಾಂಬರ್ ಬಿನ್ ನಾಗರಾಜ್, ಕಡೂರು ನಿವಾಸಿ ಎಂದು ತಿಳಿಸಿರುತ್ತಾನೆ. ಇತನನ್ನು ಹೆಚ್ಚಿನ ವಿಚಾರಣೆಗೆ ನಮ್ಮ ಠಾಣೆಗೆ ಕರೆದುಕೊಂಡು ಹೋಗಿ

ವಿಚಾರಿಸಲಾಗಿ ಆತನು ನಮಗೆ ದಿಃ 08.03.2014 ರಂದು ಒಂದು ಸ್ವ ಇಚ್ಛಾ ಹೇಳಿಕೆಯನ್ನು ನೀಡಿದ್ದು ಅದರಲ್ಲಿ ''ನನ್ನನ್ನು ಕರೆದುಕೊಂಡು ಹೋದರೆ ನಮ್ಮ ಮನೆಯಲ್ಲಿ ಇಟ್ಟಿರುವ ತಾಳಿ ಮತ್ತು ಚಿನ್ನದ ಕಡ್ಡಿಯನ್ನು ತೆಗೆದುಕೊಡುತ್ತೇನೆಂದು" ನನಗೆ ತಿಳಿಸಿರುತ್ತಾನೆ. ಸದರಿ ಸ್ವ ಇಚ್ಛಾ ಹೇಳಿಕೆಯ ಮೇಲೆ ಹೇಳಿದ ಭಾಗವನ್ನು ನಿಪಿ6 ಎಂದು ಗುರುತಿಸಲಾಯಿತು. ಸದರಿ ಸ್ವ ಇಚ್ಛಾ ಹೇಳಿಕೆಯ ಆಧಾರದಲ್ಲಿ ಆರೋಪಿಯ ಜೊತೆ ಪಂಚರಾದ ಚಾಸಾ 3 ಮತ್ತು 4 ರವರನ್ನು ಕರೆದುಕೊಂಡು ಕಡೂರು ತಾಲ್ಲೂಕಿನ ಅರಸು ಬೀದಿ ಮನೆ ನಂಬರ್ 149 ಕ್ಕೆ ಹೋಗಿ ಆರೋಪಿಯು ತೋರಿಸಿದಂತೆ ಆತನ ಮನೆಯ ಒಳಗಿನ ಒಂದು ಕೋಣೆಯಲ್ಲಿ ಇದ್ದ ಬೀರುವನ್ನು ತೆಗೆದು ನೋಡಲಾಗಿ ಅದರಲ್ಲಿ ಒಂದು ಚಿನ್ನದ ತಾಳಿ ಹಾಗೂ ಒಂದು ಚಿನ್ನದ ಕಡ್ಡಿಯು ನಮಗೆ ದೊರಕಿರುತ್ತದೆ. ಸದರಿ ವಸ್ತುಗಳನ್ನು ತೂಕ ಮಾಡಲಾಗಿ ಚಿನ್ನದ ತಾಳಿಯು ಸುಮಾರು 5 ಗ್ರಾಂ ಮತ್ತು ಚಿನ್ನದ ಕಡ್ಡಿಯು 3 ಗ್ರಾಂ ಇರುತ್ತದೆ. ನಂತರ ಸದರಿ ವಸ್ತುಗಳನ್ನು ಆ ದಿನ ಸಂಜೆ 04.00 ರಿಂದ 05.00 ಮಧ್ಯದಲ್ಲಿ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡು ಮಹಜರ್ ಅನ್ನು ತಯಾರಿಸಿರುತ್ತೇನೆ. ಸಾಕ್ಷಿಯು ನಿಪಿ4 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ4 ಬಿ ಎಂದು ಗುರುತಿಸಲಾಯಿತು. ನಂತರ ಆರೋಪಿ ಮತ್ತು ಮಾಲುಗಳ ಸಮೇತ ಬಂದು ಮಾಲುಪಟ್ಟಿಗೆ ನಮೂದಿಸಿ ಮುಂದಿನ ಕ್ರಮಕ್ಕಾಗಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಪಂಚರ ಹೇಳಿಕೆ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಅದೇ ರೀತಿ ಪಿರ್ಯಾದುದಾರರ ಹಾಗೂ ಅವರ ತಂಗಿ ಲಕ್ಷ್ಮೀದೇವಿ ರವರ ಮರು ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ. ಸದರಿ ಮರು ಹೇಳಿಕೆ ಪ್ರಕಾರ ಸದರಿ ಆಭರಣಗಳು ಅವರ ಆಭರಣ ಎಂದು ಹೇಳಿ ಗುರುತಿಸಿರುತ್ತಾರೆ. ನಂತರದಲ್ಲಿ ಸದರಿ ಆರೋಪಿ ಹರೀಶ ತಿಳಿಸಿದಂತೆ ಅವನ ಸಹಚರರಾದ ಇನ್ನಿಬ್ಬರು ಆರೋಪಿಗಳಾದ ಹರೀಶ ಯಾನಿ ವೇಸ್ಟ್ ಹಾಗೂ ಭಾಸ್ಕರ್ ಎನ್ನುವವರು ಮತ್ತೊಂದು ಪ್ರಕರಣದಲ್ಲಿ ಸಜಾ ಬಂದಿಯಾದ ಕಾರಣ ಅವರ ವಿರುದ್ದ ಬಾಡಿ ವಾರೆಂಟ್ ಹೊರಡಿಸಲು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿಃ 17.06.2014 ರಂದು ಆರೋಪಿಗಳ ವಿರುದ್ದ ಮೇಲ್ನೋಟಕ್ಕೆ ಪ್ರಕರಣ ಸಾಬೀತಾಗಿದ್ದ ಕಾರಣ ಅವರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಪ್ರಕರಣದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸುತ್ತಾರೆ. 3 ನೇ ಆರೋಪಿ ತಲೆ ಮರೆಸಿಕೊಂಡಿದ್ದು ಆತನ ವಿರುದ್ದ split up ಸಿಸಿ ದಾಖಲಾಗಿದ್ದು, 3 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮಜಂದೆ ಇರುವ ಮುದ್ದೆಮಾಲು 1 ನ್ನು ಸಾಕ್ಷಿಯು ನೋಡಿ ಗುರುತಿಸುತ್ತಾರೆ.

**:: ಪಾಟೀ ಸವಾಲು :: 1 ಮತ್ತು 2 ನೇ ಆರೋಪಿತರ ಪರ ಶ್ರೀ. SP ವಕೀಲರಿಂದ ::**

ಚಾಸಾ 8 ರವರ ತನಿಖೆಯ ಆಧಾರದಲ್ಲಿ ನಾನು ಪ್ರಕರಣದಲ್ಲಿ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಗಸ್ತು ಮಾಡಿರುತ್ತೇನೆ ಎಂದು ಹೇಳುತ್ತಿರುವ ದಿನದಂದು ನಾನು ಅರಸೀಕೆರೆ ರೈಲ್ವೆ ನಿಲ್ದಾಣದಿಂದ ಗಸ್ತು ಕರ್ತವ್ಯ ನಿರ್ವಹಿಸಿರುತ್ತೇನೆ. 3 ನೇ ಆರೋಪಿಯನ್ನು ನಾನು ಬೀರೂರು ರೈಲ್ವೆ ನಿಲ್ದಾಣದ platform ನಲ್ಲಿ ನಾವು ಹಿಡಿದಿರುತ್ತೇನೆ. 3 ನೇ ಆರೋಪಿಯು ಆ ದಿನ ಯಾವ ಬಣ್ಣದ ಬಟ್ಟೆ ಹಾಕಿರುತ್ತಾನೆಂದು ನನಗೆ ಈಗ ನೆನಪಿಲ್ಲ. ನಾನು ಹೇಳುತ್ತಿರುವ ದಿನ 1 ಮತ್ತು 2 ನೇ ಆರೋಪಿತರು ಸ್ದಳದಲ್ಲಿ ಇರಲಿಲ್ಲ ಎಂದರೆ ಸರಿ. ನನ್ನ ತನಿಖಾ ಅವಧಿಯಲ್ಲಿ ಚಾಸಾ 2 ರವರ ಗಾಯದ ಪ್ರಮಾಣಪತ್ರವನ್ನು ನಾನು ಪಡೆದಿರುವುದಿಲ್ಲ. ಯಾವುದೇ ತಾಳಿ ಸರವನ್ನು ಕಿತ್ತಲ್ಲಿ ಕುತ್ತಿಗೆಗೆ ಗಾಯ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ಆ ರೀತಿ ಚಾಸಾ 2 ರವರಿಗೆ ಗಾಯ ಆಗಿರುತ್ತದೋ ಇಲ್ಲವೋ ಎಂದು ನಾನು ಯಾವುದೇ ತನಿಖೆ ಮಾಡಿರುವುದಿಲ್ಲ. ಮು ಮಾ 1 ಚಿನ್ನದ ತಂತಿ ಹೊಸದಾದ ತಂತಿಯ ರೀತಿ ಕಂಡು ಬರುತ್ತದೆ ಎಂದರೆ ಸರಿಯಲ್ಲ. ಮು ಮಾ 1 ಚಿನ್ನದ ತಂತಿಯ ಮೇಲೆ ಯಾವುದೇ ಉಪಯೋಗಿಸಿದ ಗುರುತು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಧರಿಸಿರುವ ತಾಳಿಯ ತಂತಿಯು ನುಳಿದ ರೀತಿ ಇರುತ್ತದೆ ಎಂದರೆ ಸರಿ. ಮು ಮಾ 1 ಚಿನ್ನದ ತಂತಿಯ ಮೇಲೆ ಯಾವುದೇ ನುಳಿದ ನಿಶಾನೆ ಇರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿ ಅದನ್ನು ಕತ್ತರಿಸಿರುವ ಸಾಧ್ಯತೆ ಇರುತ್ತದೆ ಎಂದು ನುಡಿಯುತ್ತಾರೆ. ಕಳ್ಳತನವಾಗುವ ಸಮಯದಲ್ಲಿ ಚಾಸಾ 2 ರವರು ರೈಲಿನಲ್ಲಿ ಓಡಾಡುತ್ತಿದ್ದರು ಎಂದು ತೋರಿಸಲು ನಾನು ಅವರಿಂದ ಟಿಕೇಟ್ ಪಡೆದಿರುವುದಿಲ್ಲ. ನಾನು ಹೇಳುವಂತೆ ರೈಲಿನಲ್ಲಿ ಕಳ್ಳತನವಾದ್ದಲ್ಲಿ ನಾನು ಟೀಕೇಟ್ ಅನ್ನು ಕಡ್ಡಾಯವಾಗಿ ಅಮಾನತ್ತುಪಡಿಸಿಕೊಳ್ಳುತ್ತಿದ್ದೆ ಎಂದರೆ ಸಾಕ್ಷಿಯು ಘಟನೆ ನಡೆದು ತುಂಬಾ ದಿನವಾದ ಕಾರಣ ಆ ರೀತಿ ಟಿಕೇಟ್

ಪಡೆಯಲು ಸಾಧ್ಯವಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ವ್ಯಕ್ತಿಯನ್ನು ಬೀರೂರು ರೈಲ್ವೆ ನಿಲ್ದಾಣದಲ್ಲಿ ಹಿಡಿದಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತನಿಖಾ ಅವಧಿಯಲ್ಲಿ 1 ಮತ್ತು 2 ನೇ ಆರೋಪಿತರ ಯಾವುದೇ ತಪ್ಪು ಮಾಡಿರುವುದಿಲ್ಲ ಎಂದು ನನಗೆ ತಿಳಿದು ಬಂದಿದ್ದರೂ ಸಹ ಅವರ ವಿರುದ್ದ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ನನಗೆ ತೋರಿಸಿರುತ್ತಾನೆ ಎಂದು ಹೇಳುತ್ತಿರುವ ಮನೆಯ ಸರ್ಕಾರಿ ದಾಖಲೆಯನ್ನು ವಶಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ನಿಪಿ4 ಅಮಾನತ್ತು ಮಹಜರ್ ಮಾಡುವ ಸಮಯದಲ್ಲಿ ಪೋಟೋ ತೆಗೆಯಲು ತೊಂದರೆ ಇರಲಿಲ್ಲ. 3 ನೇ ಆರೋಪಿ ನನಗೆ ಯಾವುದೇ ಸ್ವ ಇಚ್ಛಾ ಹೇಳಿಕೆ ನೀಡಿರುವುದಿಲ್ಲ, ಯಾವುದೇ ಮಹಜರ್ ತಯಾರಿಸಿರುವುದಿಲ್ಲ ಹಾಗೂ ಯಾವುದದೇ ವಸ್ತು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿಗಳು ಯಾವುದೇ ತಪ್ಪು ಮಾಡದಿದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿಗಳಿಗೂ ಹಾಗೂ ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

3 ನೇ ಆರೋಪಿಯ ವಿರುದ್ದ ಪ್ರಕರಣವು split up ಆಗಿರುತ್ತದೆ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-

ಪ್ರ. ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ತರೀಕೆರೆ

ಸಾಕ್ಷಿಯ ಸಹಿ::